ದಿನಾಂಕ: **03.02.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಹೆಚ್.ಟಿ ವಕೀಲರಿಂದಃ**

ದಿಃ 04.10.2010 ರ ಪುರಸಭೆಯವರು ನೀಡಿರುವ ಕಟ್ಟಡ ನಿರ್ಮಾಣದ ಪರವಾನಗಿಯ ಧೃಡೀಕೃತ ಪ್ರತಿಯನ್ನು ನಿಪಿ-6 ಎಂದು, ದಿಃ 03.11.2018, 21.11.2019 ಪುರಸಭಾ ಕಾರ್ಯಾಲಯ, ಕಡೂರು ರವರು ಅನುಸೂಚಿತ ಜಾತಿ ಃ ಅನುಸೂಚಿತ ಪಂಗಡದವರಿಗೆ ಬರೆದಿರುವ ಪತ್ರದ ಧೃಡಿಕೃತ ನಕಲನ್ನು ನಿಪಿ-7 ಮತ್ತು 8 ಎಂದು, ದಿಃ 31.11.2015 ರಂದು ಪೋಲಿಸ್ ಅಧೀಕ್ಷಕರ ಕಾರ್ಯಾಲಯ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಮಂಗಳೂರು ರವರು ನನಗೆ ಮಾಹಿತಿ ಹಕ್ಕು ಅಧಿನಿಯಮದಡಿ ಒದಗಿಸಿರುವ 18 ಹಾಳೆಗಳಿರುವ ದಾಖಲೆಯನ್ನು ನಿಪಿ-9 ಎಂದು, 2 ಆಸ್ತಿ ವಿವರ ಮತ್ತು ಆಸ್ತಿ ತೆರಿಗೆಯ ಸ್ವಯಂ ನಿರ್ಧರಣಾ ನಮೂನೆಯ ಧೃಡೀಕೃತ ಪ್ರತಿಗಳನ್ನು ನಿಪಿ-10 ಮತ್ತು 11 ಎಂದು, 1994-95 ನೇ ಸಾಲಿನ ಮನೆ ಮತ್ತು ನಿವೇಶನ ನಿರ್ಧರಣಾ ಪಟ್ಟಿಯ ಧೃಡೀಕೃತ ಪ್ರತಿಯನ್ನು ನಿಪಿ-12 ಎಂದು, ಎಂ ಎ ಸಂಖ್ಯೆ 18ಃ2019 ರ ತೀರ್ಪಿನ ಧೃಡೀಕೃತ ನಕಲನ್ನು ನಿಪಿ-13 ಎಂದು, ಎಂ ಎ ಸಂಖ್ಯೆ 18ಃ2019 ರ ಅಪೀಲು ಮೆಮೋ, ತಕರಾರಿನ ಧೃಡೀಕೃತ ನಕಲನ್ನು ಒಟ್ಟಾಗಿ ನಿಪಿ-14 ಎಂದು, ಅಸಲು ದಾವಾ ಸಂಖ್ಯೆ 74ಃ2010 ರಲ್ಲಿ ಈ ದಾವೆಯ ಪ್ರತಿವಾದಿಯು ಸಲ್ಲಿಸಿರುವ ಸಾಕ್ಷಿ ವಿಚಾರಣಾ ಪ್ರಮಾಣಪತ್ರ ಮತ್ತು ಪಾಟೀ ಸವಾಲಿನ ಎಂ ಧೃಡೀಕೃತ ನಕಲನ್ನು ನಿಪಿ-15 ಎಂದು, ಅಸಲು ದಾವಾ ಸಂಖ್ಯೆ 74ಃ2010 ರ ಆದೇಶ ಪುಟಗಳ ಧೃಡೀಕೃತ ನಕಲನ್ನು ನಿಪಿ-16 ಎಂದು, ಅಸಲು ದಾವಾ ಸಂಖ್ಯೆ 74ಃ2010 ರ ವಾದಪತ್ರ, ಪ್ರತಿವಾದ ಪತ್ರಗಳ ಧೃಡೀಕೃತ ನಕಲನ್ನು ನಿಪಿ-17 ಎಂದು, ಅಸಲು ದಾವಾ ಸಂಖ್ಯೆ 74ಃ2010 ರ ತೀರ್ಪು ಮತ್ತು ಡಿಕ್ರಿಯ ಧೃಡೀಕೃತ ನಕಲನ್ನು ನಿಪಿ-18 ಎಂದು, 3 ಅಸಸ್ಮೆಂಟ್ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-19 ರಿಂದ 21 ಎಂದು ಗುರುತಿಸಲಾಯಿತು.

**( ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.